## ಸ್ವಾಮಿ ಜಗದಾತ್ಮಾನಂದಜಿಯವರಿಗೆ ಏರ್ಯ ಪ್ರಶಸ್ತಿ

ಮಂಗಳೂರು ನಗರದ ಕೆನರಾ ಕಾಲೇಜಿನ ಆಶ್ರಯದಲ್ಲಿ ಅಕ್ಟೋಬರ್ ೧೨ರಂದು ಕೊಡಗಿನ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರೂ ಶ್ರೀರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳೂ ಆದ ಸ್ವಾಮಿ ಜಗದಾತ್ಮಾನಂದಜಿ ಮಹಾರಾಜ್ ಅವರಿಗೆ ಏರ್ಯ ಲಕ್ಷ್ಮೀ ನಾರಾಯಣ ಆಳ್ವ ದತ್ತಿ ನಿಧಿಯ "ಏರ್ಯ ಪ್ರಶಸ್ತಿ"ಯನ್ನು ನೀಡಿ ಗೌರವಿಸಲಾಯಿತು.

ಮಂಗಳೂರಿನ ಕೊಡಿಯಾಲಬೈಲ್‌ನಲ್ಲಿರುವ ಟಿ.ಪಿ. ರಮಣ ಪೈ ಸಭಾಂಗಣದಲ್ಲಿ ಕೆನರಾ ಹೈಸ್ಕೂಲ್ ಅಸೋಸಿಯೇಶನಿನ ಅಧ್ಯಕ್ಷ ಬಸ್ತಿ ನಾರಾಯಣ ಶೆಣೈ ಅವರು ಸ್ವಾಮಿ ಜಗದಾತ್ಮಾನಂದಜಿ ಅವರಿಗೆ ಅವರ **ಬದುಕಲು ಕಲಿಯಿರಿ** ಕೃತಿಗಾಗಿ ಶಾಲು ಹೊದೆಸಿ, ಫಲಪುಷ್ಪ ಸ್ಮರಣಿಕೆಯೊಂದಿಗೆ ಏರ್ಯ ಪ್ರಶಸ್ತಿ ನೀಡಿ ಗೌರವಿಸಿದರು. ಮಂಗಳೂರಿನ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಪೂರ್ಣಕಾಮಾನಂದಜಿ ಉಪಸ್ಥಿತರಿದ್ದರು.

ಸಾವಿರಾರು ವರ್ಷಗಳಷ್ಟು ಪುರಾತನವಾದ ಭಾರತದ ಶ್ರೀಮಂತ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯನ್ನು ಪ್ರಸಕ್ತ ಪರಿಸ್ಥಿತಿಯಲ್ಲಿ ಉಪೇಕ್ಷಿಸಲಾಗುತ್ತಿರುವುದು ವಿಷಾದನೀಯ ಎಂದು ಸ್ವಾಮಿ ಜಗದಾತ್ಮಾನಂದಜಿ ಹೇಳಿದರು.

ಜನರಲ್ಲಿ ಧಾರ್ಮಿಕ ಮೌಲ್ಯಗಳು ಬೆಳೆಯಬೇಕಾದಷ್ಟು ಬೆಳೆದಿಲ್ಲ. ಧರ್ಮಶ್ರದ್ಧೆ ಕಡಮೆಯಾಗುತ್ತಿದೆ. ಜತೆಗೆ ಬುದ್ಧಿಜೀವಿಗಳೆಂದು ಕರೆದುಕೊಳ್ಳುವವರ ಹಾವಳಿ ಬೇರೆ. ಇದರಿಂದಾಗಿ ಸಮಾಜದಲ್ಲಿ ಅಶಾಂತಿ ನೆಲೆಸುವಂತಾಗಿದೆ ಎಂದ ಅವರು ಭಾರತೀಯ ಸಂಸ್ಕೃತಿ ಧರ್ಮಗಳ ಬಗ್ಗೆ ಜನಸಾಮಾನ್ಯರಿಗೆ ತಿಳಿಹೇಳುವ ಕಾರ್ಯ ನಡೆಯದಿರುವುದರಿಂದ ಇಂದಿನ ಯುವಜನಾಂಗ ಮಾರ್ಗದರ್ಶನರಹಿತ ಜನಾಂಗವಾಗಿ ಬೆಳೆಯುತ್ತಿದೆ ಎಂದರು.

ಮಾನವನು ಜೀವನವನ್ನು ನೋಡುವ ದೃಷ್ಟಿಕೋನ ಬದಲಾದರೆ ಬದುಕಿಗೆ ಹೊಸ ಆಯಾಮ ದೊರಕಲು ಸಾಧ್ಯ. ಅಂತೆಯೇ, ಸತ್ಯವನ್ನು ತಿಳಿದುಕೊಂಡಾಗ ಬದುಕು ಬದಲಾಗಲು ಸಾಧ್ಯ. ಮನುಷ್ಯ ಮನಸ್ಸನ್ನು ಅರಿತುಕೊಂಡರೆ ಬದುಕು ಉಜ್ವಲವಾಗಬಹುದು. ಈ ನಿಟ್ಟಿನಲ್ಲಿ ಯುವಜನಾಂಗ ಮನಸ್ಸನ್ನು ನಿಗ್ರಹಿಸುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕಾಗಿದೆ ಎಂದು ಸ್ವಾಮಿ ಜಗದಾತ್ಮಾನಂದಜಿಯವರು ನುಡಿದರು.

ಹಿರಿಯ ಸಾಹಿತಿ ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರು ಧಾರ್ಮಿಕ ಸಾಮಾಜಿಕ ವಿಚಾರಧಾರೆಗಳನ್ನು ಮನದಟ್ಟು ಮಾಡುವ ಸ್ವಾಮಿ ಜಗದಾತ್ಮಾನಂದಜಿಯವರ **ಬದುಕಲು ಕಲಿಯಿರಿ** ಕೃತಿ ಇಂದಿನ ಯುವ ಜನಾಂಗಕ್ಕೆ ಉತ್ತಮ ಮಾರ್ಗದರ್ಶನ ನೀಡಬಲ್ಲುದು ಎಂದು ಹೇಳಿದರು.

## ಕೊಡಗಿನಲ್ಲಿ ಭವ್ಯ ಜ್ಞಾನವಾಹಿನಿ ಅಭಿಯಾನ

ಕಾವೇರಿಯ ತವರೂರೂ ಪ್ರಕೃತಿಸೌಂದರ್ಯದ ನೆಲೆವೀಡೂ ಆದ ಕೊಡಗು ಜಿಲ್ಲೆಯಲ್ಲಿ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಸಹಕಾರದೊಂದಿಗೆ ಅಕ್ಟೋಬರ್ ೧ ರಿಂದ ೨೦ ರವರೆಗೆ ಜ್ಞಾನವಾಹಿನಿ ಅಭಿಯಾನವು ಅತ್ಯಂತ ಯಶಸ್ವಿಯಾಗಿ ಜರುಗಿತು. ಎಲ್ಲೆಡೆ ಗ್ರಾಮಸ್ಥರು ಬೆಳಗ್ಗೆಯಿಂದ ಸಂಜೆಯ ವರೆಗೆ ಬಹಳ ಉತ್ಸಾಹದಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು ಮತ್ತು ಶಾಲಾ ಬಾಲಕಬಾಲಕಿಯರು ವ್ಯಕ್ತಿತ್ವ ವಿಕಸನ ಕಾರ್ಯಾಗಾರಗಳ ಪ್ರಯೋಜನ ಪಡೆದುಕೊಂಡರು. ಹಲವಾರು ಕಡೆ ನೂರಾರು ಮಂದಿಗೆ ಅನ್ನ ಸಂತರ್ಪಣೆ ಕೂಡ ನಡೆಯಿತು.

೨೦ ದಿನಗಳಲ್ಲಿ ಒಟ್ಟು ೧೬ ಗ್ರಾಮಗಳಲ್ಲಿ ಅಭಿಯಾನವು ಸಂಚಾರ ಮಾಡಿತು. ೨೬ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳು ನಡೆದು ೪,೨೦೨ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡಿದ್ದರು. ೨೫ ಕಡೆ ಸತ್ಸಂಗ ಕಾರ್ಯಕ್ರಮಗಳು ಜರುಗಿ ಅವುಗಳಲ್ಲಿ ೪೯೧೦ ಗ್ರಾಮಸ್ಥರು ಭಾಗವಹಿಸಿದ್ದರು.

## ಚಿಕ್ಕಮಗಳೂರಿನಲ್ಲಿ ಜ್ಞಾನವಾಹಿನಿ ಅಭಿಯಾನ

ಚಿಕ್ಕಮಗಳೂರು ಜಿಲ್ಲೆಯಲ್ಲಿ ನವೆಂಬರ್ ತಿಂಗಳು ದಿನಾಂಕ ತಾರೀಖು ೨೧ರಿಂದ ಜ್ಞಾನವಾಹಿನಿ ಅಭಿಯಾನ ನಡೆಯಲಿದೆ. ಇದರಲ್ಲಿ ವಿವೇಕಪ್ರಭದ ಓದುಗರು ಸಕ್ರಿಯವಾಗಿ ಪಾಲುಗೊಳ್ಳಬೇಕೆಂದು ಕೋರಲಾಗಿದೆ. ಹೆಚ್ಚಿನ ವಿವರಗಳನ್ನು ಜಿಲ್ಲಾ ಸಂಯೋಜಕರಾದ **ಶ್ರೀ ಕೆ.ಎಸ್. ಶ್ರೀನಿವಾಸ್, ಕೌಲಿ ಎಸ್ಟೇಟ್, ಜಯಪುರ, ಕೊಪ್ಪ ತಾಲೂಕು , ಫೋನ್: (08265) 245141** ಇವರಿಂದ ಪಡೆಯಬಹುದು.

### ಆಶ್ರಮದ ಕಾರ್ಯಕ್ರಮಗಳು

### ಡಿಸೆಂಬರ್ 2004

| | | |
|---|---|---|
| ಏಕಾದಶಿ | 8 | ಬುಧವಾರ |
| ಸ್ವಾಮಿ ಪ್ರೇಮಾನಂದ ಜಯಂತಿ | 20 | ಸೋಮವಾರ |
| ಏಕಾದಶಿ | 22 | ಬುಧವಾರ |
| ಕ್ರಿಸ್‌ಮಸ್ ಈವ್ | 24 | ಶುಕ್ರವಾರ |

**ಆಶ್ರಮದಲ್ಲಿ ಪ್ರತಿ ಏಕಾದಶಿಯಂದು ರಾಮನಾಮ ಸಂಕೀರ್ತನೆ, ಪ್ರತಿ ಶನಿವಾರ ಇಂಗ್ಲೀಷ್‌ನಲ್ಲಿ ಮತ್ತು ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿ ಪ್ರವಚನಗಳು ನಡೆಯುತ್ತವೆ. ಎಲ್ಲರಿಗೂ ಸುಸ್ವಾಗತ.**